ಓ. ಎಸ್. ನಂಃ 144/2019

ಪಿ . ಡಬ್ಲ್ಯೂಃ 3

ದಿಃ26-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ ಎಫ್ ಎಚ್ ಪ್ರತಿವಾದಿ ಪರ ವಕೀಲರಿಂದ ಃ

ನಾನು ಶಿಗ್ಗಾವನಲ್ಲಿ ವಾಸ ಇದ್ದೇನೆ . ಮೊದಲು ವಕ್ಕಲುತನ ಮಾಡುತಿದ್ದೆ ಈಗ ಶಿಗ್ಗಾವಿಯಲ್ಲಿ ವ್ಯಾಪಾರ ಮಾಡುತಿದ್ದೇನೆ. ಕರಿಯಪ್ಪ ನನಗೆ ಚೆನ್ನಾಗಿ ಪರಿಚಯ ಇದ್ದಾರೆ . ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ ಎಂದರೆ ಸರಿ . ಕೇಸ ಇದೆ ಎಂದು ಅಂಕಲಕೋಟಿ ವಕೀಲರು ಮಾಹಿತಿ ಕೊಟ್ಟಿದ್ದಾರೆ . ಸದರಿಯವರು ವಾದಿಯ ಪರ ವಕೀಲರು ಎಂದರೆ ಸರಿ .ಈ ದಾವೆ ಬಗ್ಗ ಸಂಪೂರ್ಣ ಮಾಹಿತಿ ಇಲ್ಲ .ಕರಿಯಪ್ಪ ಅವರು ನನಗೆ ಈ ಮೊದಲು ಯಾವಾಗ ಬೇಟಿ ಆಗಿದ್ದರು ಎಂದು ನೆನಪಿಲ್ಲ. ಗಂಗವ್ವ ಅವರಿಂದ ಕರಿಯಪ್ಪ ಅವರು ಕಾಗದ ಮಾಡಿಸಿಕೊಂಡಿದ್ದಾರೆ . ಗಂಗವ್ವ ಅವರ ಊರು ಶೆರೆವಾಡ ಎಂದರೆ ಸರಿ . ಗಂಗವ್ವ ಅವರು ತಿರಿಕೊಂಡಿದ್ದಾರೆ . ಗಂಗವ್ವ ಯಾವಾಗ ತಿರಿಕೊಂಡಿದ್ದಾರೆ ಎಂದು ಗೊತ್ತಿಲ್ಲ . ಗಂಗವ್ವ ಅವರು ನನಗೆ ವಯಕ್ತಿಕವಾಗಿ ಪರಿಚಯ ಇದ್ದರು . ಸುಮಾರು 70-80 ವರ್ಷದಿಂದ ಮದುವೆ ಆಗಿ ಶೆರೆವಾಡದಲ್ಲಿ ವಾಸ ಇದ್ದರು ಎಂದರೆ ಸಾಕ್ಷಿ ಬಂದು ಹೋಗಿ ಮಾಡುತಿದ್ದರು ಎಂದರು . ನಾನು ಕಬನೂರು ಬಿಟ್ಟು ಬಂದು 15 ವರ್ಷ ಆಗಿದೆ . ನನಗೆ ಕಬನೂರಿನಲ್ಲಿ ಆಸ್ತಿ ಇದೆ . ಈಗಿನ ಮಾರು ಕಟ್ಟೆ ಬೆಲೆ ಗೊತ್ತಿಲ್ಲ . ದಾವಾ ಆಸ್ತಿ ಸರ್ವೆ ನಂಬರ 32 ಕ್ಷೇತ್ರ 3 ಎಕರೆ ಇರುತ್ತದೆ . ಅದರಲ್ಲಿ 2 ಎಕರೆ ಮಾರಾಟ ಮಾಡಿದ್ದಾರೆ . ಅದರ ಚಕುಬಂದಿ ಸರಿಯಾಗಿ ಗೊತ್ತಿಲ್ಲ . ಸದರಿ ವಿಷಯ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ . ಸದರಿ ದಾವೆ ಬಗ್ಗ ಮಾಹಿತಿ ಇಲ್ಲ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . 1,80,000/- ರೂಗೆ ಕರಿಯಪ್ಪ ಮತ್ತು ಗಂಗವ್ವ ನಡುವೆ ವ್ಯವಹಾರ ಆಗಿತ್ತು . ಯಾವ ದಿನದಂದು ವ್ಯವಹಾರ ಆಗಿತ್ತು ಎಂದು ಗೊತ್ತಿಲ್ಲ .ನನ್ನ ಸಮಕ್ಷಮ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ . ವ್ಯವಹಾರ ಆದ ಕಾಲಕ್ಕೆ ಕರಿಯಪ್ಪ , ಕಾಶಮ್ಮ ,ವೀರಪ್ಪ ಶೆಟ್ಟಪ್ಪನವರ , ಕಾಶವ್ವ ಅವರ ಮಗ ಇದ್ದರು . ಕಾಗದ ಆಗುವ ಕಾಲಕ್ಕೆ ನಾನು ಇದ್ದೆ . ಮಲ್ಲಪ್ಪ ಅವರ ಸಹಿಯನ್ನು ಕಾಗದಕ್ಕೆ ಪಡೆದೀರಾ ಎಂದರೆ ಮಾಹಿತಿ ಇಲ್ಲ . ಕಾಗದ ಮಾಡುವ ಕಾಲಕ್ಕೆ ಮಲ್ಲಪ್ಪ ಇರಲಿಲ್ಲ . ಒಂದು ಸಲ ಮಲ್ಲಪ್ಪ ಇದ್ದ ಒಂದು ಸಲ ಮಲ್ಲಪ್ಪ ಇಲ್ಲ ಎಂದು

ನುಡಿಯತಿದ್ದು ನನ್ನ ಸಮಕ್ಷಮ ಯಾವುದೇ ಕಾಗದ ಆಗದ ಕಾರಣ ನಿಖರವಾಗಿ ಯಾರು ಇದ್ದರು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ . ನನ್ನ ಸಮಕ್ಷಮ ಯಾವುದೇ ಕಾಗದ ಪತ್ರ ಆಗಿಲ್ಲ ಎಂದರೆ ಸರಿಯಲ್ಲ .ಕುಲಕರ್ಣಿಯವರ ಶಿಗ್ಗಾವಿಯ ಕಚೇರಿಯಲ್ಲಿ ನನ್ನ ಸಮಕ್ಷಮ ಕಾಗದ ಬರೆದಿದ್ದಾರೆ . ಗಂಗವ್ವ ಬಂದಿಲ್ಲ ಕಾಗದ ಮಾಡಿಲ್ಲ ಎಂದರೆ ಸರಿಯಲ್ಲ . ಗಂಗವ್ವ ಮತ್ತು ಅವರ ಅಣ್ಣ ತಮ್ಮಂದಿರ ಮದ್ಯ ಇದೇ ನ್ಯಾಯಾಲಯದಲ್ಲಿ ದಾವಾ ಆಸ್ತಿ ಕುರಿತು ನ್ಯಾಯ ನಡೆದಿತ್ತು ಎಂದರೆ ಇರಬಹುದು . ನ್ಯಾಯ ನಡೆದಿದ್ದರಿಂದ ದಾವಾ ಆಸ್ತಿ ಒಟ್ಟು ಕುಟುಂಬದ್ದು ಇತ್ತು ಎಂದರೆ ಸಾಕ್ಷಿಯು ಮೂಲ ಮಾಲೀಕ ಮಲ್ಲೇಶಪ್ಪ ತಿರಿಕೊಂಡ ನಂತರ ಗಂಗವ್ವನಿಗೆ ಕೊಟ್ಟಿರಬಹುದು . ದಾವಾ ಆಸ್ತಿಯ ಮೇಲೆ ಇದೆ ನ್ಯಾಯಾಲಯದಲ್ಲಿ ಪ್ರಕರಣ ಇದ್ದ ಕಾರಣ ಗಂಗವ್ವನಿಗೆ ಕಾಗದ ಮಾಡುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ . ಗಂಗವ್ವನಿಗೆ ಸಂಪೂರ್ಣವಾಗಿ ಆಸ್ತಿ ಬರದೇ ಇದ್ದ ಕಾರಣ ಮಾರಾಟ ಮಾಡುವ ಅಗತ್ಯ ಇರಲಿಲ್ಲ ಎಂದರೆ ಸರಿಯಲ್ಲ . ನ್ಯಾಯಾಲಯಕ್ಕೆ ಕೊಟ್ಟಿ ಕಾಗದ ಹಾಜರುಪಡಿಸಿ ಗಂಗವ್ವನ ಆಸ್ತಿ ಎತ್ತಿ ಹಾಕಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ದಾವಾ ಆಸ್ತಿಯನ್ನು ಇವತ್ತಿನವರೆಗೆ ಪ್ರತಿವಾದಿಯವರು ಕಬ್ಜೆ ಮತ್ತು ವಹಿವಾಟು ಮಾಡುತ್ತಾರೆ ಎಂದರೆ ಗೊತ್ತಿಲ್ಲ. ಕರಿಯಪ್ಪ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಗಂಗವ್ವ ಮತ್ತು ಅವರ ಮಕ್ಕಳು ನನಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ಓ. ಎಸ್. ನಂಃ 144/2019

ಪಿ . ಡಬ್ಲ್ಯೂಃ 2

ದಿಃ26-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಜಿ ಎಪ್ ಎಚ್ ಪ್ರತಿವಾದಿ ಪರ ವಕೀಲರಿಂದ ಃ

ನಾನು 39 ವರ್ಷದಿಂದ ಬಾಂಡ ರೈಟರ ಆಗಿ ಕೆಲಸ ಮಾಡುತ್ತೇನೆ. ಲೈಸನ್ಸ ಪಡೆದುಕೊಂಡಿದ್ದೇನೆ . ದಸ್ತು ಬರಹಗಾರರ ಪರವಾನಿಗೆ ಪತ್ರವನ್ನು ಹಾಜರುಪಡಿಸಿಲ್ಲ . ಅದನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ದಸ್ತು ಬರಹಗಾರರ ಪರವಾನಿಗೆ ಪತ್ರವನ್ನು ಜಿಲ್ಲಾ ನೊಂದಣಿ ಅದಿಕಾರಿಗಳು ನೀಡುತ್ತಾರೆ. ವರ್ಷಕ್ಕೆ ಒಂದು ಸಾರಿ ಪರವಾನಿಗೆ ಪತ್ರವನ್ನು ನವೀಕರಿಸುತ್ತೇವೆ . 39 ವರ್ಷಗಳಲ್ಲಿ ಸಾಕಷ್ಟು ಕಾಗದಗಳನ್ನು ಮಾಡಿದ್ದೇನೆ ಎಂದರೆ ಸರಿ. ನವೀಕರಿಸುವ ಸಮಯದಲ್ಲಿ ನಾನು ಎಷ್ಟು ಪತ್ರಗಳನ್ನು ಆ ವರ್ಷ ಮಾಡಿದ್ದೇನೆ ಎಂದು ರಜಿಸ್ಟರನಲ್ಲಿ ಬರೆದಿರುತ್ತೇನೆ ಎಂದರೆ ಸರಿ . ನವೀಕರಿಸುವ ಸಮಯದಲ್ಲಿ ಸದರಿ ರಜಸ್ಟರ ಅನ್ನು ಹಾಜರುಪಡಿಸಿರುತ್ತೇವೆ ಎಂದರೆ ಸರಿ. ಈ ದಾವೆಗೆ ಸಂಬಂದಪಟ್ಟಂತೆ ರಜೆಸ್ಟರನ ಪುಟವನ್ನು ಹಾಜರುಪಡಿಸಿಲ್ಲ . ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ ಬಂದಿಲ್ಲ.ಸಾಕ್ಷಿ ಹೇಳಲು ಕರಿಯಪ್ಪಅವರು ನನ್ನನ್ನು ಕರೆದುಕೊಂಡು ಬಂದರು. ಕರಿಯಪ್ಪ ಅವರು ಗಂಗವ್ವ ಅವರ ವಿರುದ್ದ ದಾವೆ ಮಾಡಿದ್ದಾರೆ . ಈ ದಾವೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ . ನಾನು 39 ವರ್ಷದಿಂದ ಕಾಗದಗಳನ್ನು ಬರೆಯುತಿದ್ದು ಪ್ರತ್ಯೇಕವಾಗಿ ಯಾರಿಗೆ ಕಾಗದ ಮಾಡಿಕೊಟ್ಟಿದ್ದೇನೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ . 2010 ರಲ್ಲಿ ಈ ದಾವೆಗೆ ಸಂಬಂದಿಸಿದಂತೆ ಕಾಗದವನ್ನು ಮಾಡಿದ್ದೇನೆ . ಕಾಗದ ಮಾಡುವ ಮೊದಲು ಅದಕ್ಕೆ ಸಂಬಂದಪಟ್ಟ ಪಕ್ಷಗಾರ ಮತ್ತು ಆಸ್ತಿಯ ವಿವರವನ್ನು ಪಡೆದುಕೊಳ್ಳುತ್ತೇನೆ . ಕರಿಯಪ್ಪ ಮತ್ತು ಗಂಗವ್ವ ಅವರಿಂದ ಪಹಣಿ ಮ್ಯುಟೇಶನ, ಪಿ ಟಿ ಶೀಟ , ಶೆಡ್ಯೂಲ ಹಾಗೂ ಸರ್ವೆ ನಂಬರ ಮಾಹಿತಿ ಪಡೆದು ಕಾಗದ ಬರೆದಿದ್ದೇನೆ. ರಿಸನಂಬರ 33/2 ಇರುತ್ತದೆ . ಸದರಿ ಆಸ್ತಿ ಯಾರಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ಮುಂದುವರೆದು ಡ ಉತಾರದಲ್ಲಿ ತಂದೆ ಇಂದ ಬಂದಿದೆ ಎಂದು ನಮೂದು ಇತ್ತು. ಗಂಗವ್ವನಿಂದ ಅಣ್ಣ ತಮ್ಮಂದಿರು ಅಕ್ಕ ತಂಗಿಯರು ಯಾರು ಇದ್ದಾರೆ ಎಂದು ಮಾಹಿತಿ ಪಡೆದುಕೊಂಡಿರಾ ಎಂದರೆ ಅವರೇ ಬೇಡ ಎಂದು

ಹೇಳಿದರು. 27-04- 2010 ರಂದು ಗಂಗವ್ವ ಮತ್ತು ಕರಿಯಪ್ಪ ಬಂದಿದ್ದರು . ಮಾತುಕತೆಯನ್ನು ಅವರೇ ಮಾಡಿಕೊಂಡು ಬಂದಿದ್ದು ನನ್ನ ಮುಂದೆ ಮಾತುಕತೆ ಆಗಿಲ್ಲ . ಗಂಗವ್ವ ಎಷ್ಟು ಹಣ ಪಡೆದುಕೊಂಡಿದ್ದಾರೆ ಎಂದು ಕೇಳಿಲ್ಲ . ಪ್ರಮಾಣ ಪತ್ರ ಬರೆಯಲು ನಾನು ಮಾಹಿತಿ ಕೊಟ್ಟಿದ್ದೇನೆ .ನಾನು ಹಾಜರುಪಡಿಸಿದ ಪ್ರಮಾಣ ಪತ್ರ ಯಾರ ಮಾಡಿದರು ಎಂದು ಹೇಳಲು ಬರುವುದಿಲ್ಲ.ಅದೇ ರೀತಿ ನನಗೆ 2010 ರಲ್ಲಿ ಮಾಡಿದ ಕಾಗದದ ಬಗ್ಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ .ನನ್ನ ಸಮಕ್ಷಮ ಹಣ ಕೊಡುವುದು ಪಡೆಯುವುದು ಹಾಗೂ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ . ಗಂಗವ್ವ ಅವರಿಗೆ ಕರಿಯಪ್ಪ ಅವರು ರೂ 100 ಮುಖಬೆಲೆಯ ಎರಡು ಕಟ್ಟುಗಳನ್ನು ಮತ್ತು 1 ಲಕ್ಷರೂ ನನ್ನ ಕಚೆರಿಯಲ್ಲಿ ಕೊಟ್ಟಿದ್ದಾರೆ . ಕಾಗದ ಆಗುವ ಮೊದಲು ಹಣವನ್ನು ಕೊಟ್ಟಿದ್ದಾರೆ .28-04- 2010 ರಂದು ಖರೀದಿ ಕಾಗದ ಆಗಿದೆ . ಕರಾರು ಪತ್ರವನ್ನು ವಾದಿರಾಜ ಕಟ್ಟಿ ಅವರು ಟೈಪ ಮಾಡಿದ್ದಾರೆ . ವಾದಿರಾಜ ಕಟ್ಟಿ ಅವರು ಟೈಪ ಮಾಡಿದ ಬಗ್ಗೆ ದಸ್ತೂರು ಹಾಕಿಸಿಲ್ಲ . ವಾದಿರಾಜ ಕಟ್ಟಿ ಅವರು ಮೇ 2010 ರಲ್ಲಿ ತೀರಿಕೊಂಡಿದ್ದಾರೆ. ಉದ್ದೇಶಪೂರ್ವಕವಾಗಿ ವಾದಿರಾಜ ಕಟ್ಟಿ ಅವರ ದಸ್ತೂರು ಹಾಕಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಗೆ ನಿಪಿ-5 ತೋರಿಸಿದ್ದು ಅದರಲ್ಲಿ ದಸ್ತೂರು ಯಾರು ಮಾಡಿದ್ದಾರೆ ಎಂದರೆ ಗಂಗವ್ವ ಮಾಡಿದ್ದಾರೆ .ಗಂಗವ್ವ ಹೆಬ್ಬೆಟ್ಟು ಹಾಕಿದ್ದಾರೆ ಅದಕ್ಕೆ ನಾನು ದಸ್ತೂರು ಮಾಡಿಲ್ಲ .ಗಂಗವ್ವ ಕಾಗದಕ್ಕೆ ಸಹಿ ಮಾಡಿಲ್ಲ ನಾನು ಕರಿಯಪ್ಪ ಅವರು ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ಗಂಗವ್ವ 1 ಲಕ್ಷ ರೂ ಹಣ ಪಡೆದಿಲ್ಲ ಆದರೂ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ . ಗಂಗವ್ವ 1 ಲಕ್ಷ ರೂಹಣ ಪಡೆದ ಬಗ್ಗೆ ಯಾವುದೇ ರಸೀದಿ ಮಾಡಿಲ್ಲ . ಗಂಗವ್ವ ಅವರು ಮಗಳ ಮದುವೆ ಸಲುವಾಗಿ ಮಾರಾಟ ಮಾಡಿದ್ದಾರೆ ಎಂದು ಕಾರಣ ತೊರಿಸಿದ್ದಾರೆ . ಯಾರ ಮದುವೆ ಎಂದು ಸಂಪೂರ್ಣ ಮಾಹಿತಿ ಕಾಗದದಲ್ಲಿ ಬರೆದಿಲ್ಲ ಎಂದರೆ ಸರಿ . ಗಂಗವ್ವ ಅವರ ಮಗಳಿಗೆ ಮದುವೆ ಆಗಿ 20 ವರ್ಷದ ಮಗಳಿದ್ದಾಳೆ ಎಂದರೆ ಅವರು ಹೇಳಿದಂತೆ ಬರೆದಿದ್ದೇನೆ . ಗಂಗವ್ವ ಅವರಿಗೆ ಆಸ್ತಿ ಮಾರಾಟ ಮಾಡುವ ಅಗತ್ಯ ಇರಲಿಲ್ಲ ಎಂದರೆ ಸರಿಯಲ್ಲ . ನನ್ನ ಕಚೆರಿಯಲ್ಲಿ ಆ ಸಮಯದಲ್ಲಿ ಟೈಪಿಂಗ ಮಶಿನ್ ಇರಲಿಲ್ಲ ನನ್ನ ಸಮಕ್ಷಮ ಯಾವುದೇ ಕಾಗದ ಮಾಡಿಲ್ಲ ಎಂದರೆ

ಸರಿಯಲ್ಲ. ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.